*4* ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಮೆಯೋಹಾಲ್,ಬೆಂಗಳೂರು

ಶ್ರೀ ಡಿ.ಎಸ್. ವಿಜಯಕುಮಾರ್, ಬಿಎಸ್ಸಿ., ಎಲ್ಎಲ್ ಬಿ.,
*I/c.4* ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ದಿನಾಂಕಃ *19* ನೇ ಜನವರಿ *2021*

# ಕ್ರಿಮಿನಲ್.ಮಿಸ್.ನಂ.*25013/2021 &25017/2021*

| | | |
|---|---|---|
| **ಕ್ರಿಮಿನಲ್ .ಮಿಸ್.ನಂ. *25013/2021* ನಲ್ಲಿನ** ಅರ್ಜಿದಾರಃ | 1 | ಶ್ರೀ. ಸೈಫ್ ಪಾಶ,<br>ಬಿನ್ ಇರ್ಷಾದ್ ಪಾಶ,<br>ಸುಮಾರು 25 ವರ್ಷ,<br>ವಾಸಃ ನಂಃ 29/3, 3 ನೇ ಕ್ರಾಸ್, ಎ-ಬ್ಲಾಕ್,<br>ಪಿ.ಎಚ್. ಕಾಲೋನಿ,<br>ಜಾನಕಿರಾಮ ಲೇ-ಔಟ್,<br>ಕಮ್ಮನಹಳ್ಳಿ,<br>ಬೆಂಗಳೂರು-560 033.<br>(ಆರೋಪಿ-1)<br><br>ಪ್ರತಿನಿಧಿಸುವವರುಃ ಶ್ರೀ ಕೆ. ಶ್ರೀನಿವಾಸಗೌಡ, ವಕೀಲರು |
| **ಕ್ರಿಮಿನಲ್ .ಮಿಸ್.ನಂ. *25017/2021* ನಲ್ಲಿನ** ಅರ್ಜಿದಾರಃ | | ಶ್ರೀ. ಮೊಹಿನುದ್ದೀನ್ ಖುರೇಶಿ ಅಲಿಯಾಸ್ ಮೊಹಿನ್,<br>ಬಿನ್ ಅಬ್ದುಲ್ ಕರೀಂ ರೆಹಮತ್ ಖುರೇಶಿ ಅಲಿಯಾಸ್ ಪಾಶ,<br>ಸುಮಾರು 26 ವರ್ಷ,<br>ಪಂಚಮುಖಿ ಅಪಾರ್ಟ್‌ಮೆಂಟ್ಸ್,<br>ವೀರಣ್ಣನ ಪಾಳ್ಯ,<br>ನಾಗವಾರ ಮುಖ್ಯ ರಸ್ತೆ,<br>ಬೆಂಗಳೂರು.<br>(ಆರೋಪಿ-2)<br>ಪ್ರತಿನಿಧಿಸುವವರುಃ ಶ್ರೀ ಅುಣ್ ಕುಮಾರ್, ವಕೀಲರು |

ವಿರುದ್ಧ

| | | |
|---|---|---|
| ಎದುರುದಾರರುಃ | | ಬೈಯ್ಯಪ್ಪನಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು |

ಪ್ರತಿನಿಧಿಸುವವರುಃಸರ್ಕಾರಿ ಅಭಿಯಾಜಕರು.

# ಆದೇಶ

ಅರ್ಜಿದಾರರು/*1* ಮತ್ತು *2* ನೇ ಆರೋಪಿತರು ಪ್ರತ್ಯೇಕ ಅರ್ಜಿಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ *439* ರ ಅಡಿಯಲ್ಲಿ ಸಲ್ಲಿಸಿ ಎದುರುದಾರ ಪೊಲೀಸ್ ಠಾಣೆಯಲ್ಲಿ ನೊಂದಾವಣೆಯಾಗಿರುವ ಮೊಕದ್ದಮೆ ಸಂಖ್ಯೆಃ *142/2020* ರಲ್ಲಿ ಭಾ.ದಂ.ಸಂ ಕಲಂ *420,379,* ಸಹವಾಚಕ ದಂ.ಪ್ರ.ಸಂ. *41* ಮತ್ತು *102* ರ ಅಪರಾಧಕ್ಕೆ ಜಾಮೀನು ನೀಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದಾರೆ.

*2.* ಅರ್ಜಿದಾರರ ಈ ಅರ್ಜಿಗಳ ಸಾರಾಂಶ ಈ ಕೆಳಕಂಡಂತೆ ಇದೆಃ-

ಎದುರುದಾರ -ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಸಿಬ್ಬಂದಿ ಜೊತೆ ಗಸ್ತಿನಲ್ಲಿ ಇದ್ದಾಗ ಆರೋಪಿತರು ಅನುಮಾನಾಸ್ಪದವಾಗಿ ಓಡಾಡುತ್ತಿದ್ದು ಅವರ ಬಳಿ ಒಂದು ಬ್ಯಾಗ್ನಲ್ಲಿ ಲ್ಯಾಪ್‌ಟಾಪ್‌ಗಳನ್ನು ಇಟ್ಟುಕೊಂಡು ಮಾರಾಟ ಮಾಡಲು ಬಂದಿದ್ದ ಅವರನ್ನು ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದಾಗ ಅವರು ಓಡಿಹೋಗಲು ಪ್ರಯತ್ನಿಸಿದ್ದು ಅವರನ್ನು ದಸ್ತಗಿರಿ ಮಾಡಿ ವಿಚಾರಣೆಗೊಳಪಡಿಸಿದ್ದು ಅವರು ಸಮಂಜಸ ಉತ್ತರವನ್ನು ನೀಡಲಿಲ್ಲ. ನಂತರ ವಿಚಾರಣೆ ಮಾಡಿದಾಗ ಅರ್ಜಿದಾರ/*2* ನೇ ಆರೋಪಿ ತನ್ನ ಬಳಿ ಇದ್ದ *25* ಲ್ಯಾಪ್ಟಾಪ್ಗಳನ್ನು ತೋರಿಸಿ ಅವುಗಳಲ್ಲಿ *4* ಲ್ಯಾಪ್ಟಾಪ್ ಗಳನ್ನು ಅರ್ಜಿದಾರ/*1* ನೇ ಆರೋಪಿಗೆ ಮಾರಾಟ ಮಾಡಲು ಹೇಳಿ ಬಂದ ಹಣದಲ್ಲಿ ಇಬ್ಬರೂ ಅರ್ಧರ್ಧ ಹಣವನ್ನು ಹಂಚಿಕೊಳ್ಳುವುದು ಎಂದು ತಿಳಿಸಿದರು ಎಂದು ವರದಿಯನ್ನು ನೀಡಿದ್ದು ಅದರ

ಆಧಾರದ ಮೇಲೆ ಭಾ.ದಂ.ಸಂ ಕಲಂ *420,379,* ಸಹವಾಚಕ ದಂ.ಪ್ರ.ಸಂ. *41* ಮತ್ತು *102* ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ.

*3.* ಅರ್ಜಿದಾರರು/*1* ಮತ್ತು *2* ನೇ ಆರೋಪಿತರು ಯಾವುದೇ ಅಪರಾಧ ಎಸಗಿಲ್ಲ, ಅವರನ್ನು ಕೇಸಿನಲ್ಲಿ ಸಿಕ್ಕಿಸಲಾಗಿದೆ ಅವರು ಯಾವುದೇ ಷರತ್ತುಗಳನ್ನು ಪಾಲನೆ ಮಾಡುತ್ತಾರೆ. ಆಪಾಧಿಸಲಾದ ಆರೋಪಗಳು ಮರಣ ದಂಡನೆ ಅಥವಾ ಜೀವಾವಧಿ ಶಿಕ್ಷೆಗೊಳಪಡಿಸುವ ಅಪರಾಧಗಳಾಗಿರುವುದಿಲ್ಲ. ಆದ್ದರಿಂದ ಅರ್ಜಿದಾರರು/*1* ಮತ್ತು *2* ನೇ ಆರೋಪಿತರು ತಮಗೆ ಜಾಮೀನು ನೀಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದಾರೆ.

*4.* ಅಭಿಯೋಜನೆ ತಕರಾರು ಸಲ್ಲಿಸಿ ಪ್ರಥಮ ವರ್ತಮಾನ ವರದಿಯ ಸಂಗತಿಗಳನ್ನು ಪುನರುಚ್ಚರಿಸಿ ಅರ್ಜಿದಾರರು/*1* ಮತ್ತು *2* ನೇ ಆರೋಪಿಗಳಿಗೆ ಜಾಮೀನು ನೀಡಿದರೆ ಸಾಕ್ಷೀದಾರರಿಗೆ ಬೆದರಿಕೆ ಹಾಕಿ ಸಾಕ್ಷ್ಯ ನಾಶಪಡಿಸುವ ಸಾಧ್ಯತೆ ಇದೆ. ತನಿಖೆಗೆ ಅಡ್ಡಿ ಉಂಟುಮಾಡಿ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡು ಇರುವ ಸಾಧ್ಯತೆ ಇದೆ. ಆದ್ದರಿಂದ ಜಾಮೀನು ಅರ್ಜಿಗಳನ್ನು ವಜಾ ಮಾಡಬೇಕೆಂದು ಕೋರಿರುತ್ತಾರೆ.

*5.* ವಾದವನ್ನು ಕೇಳಲಾಗಿದೆ.

*6.* ಈ ಮೇಲ್ಕಂಡ ಸನ್ನಿವೇಶಗಳಲ್ಲಿ ಈ ಕೆಳಕಂಡಂತೆ ಅಂಶಗಳನ್ನು ನಿರ್ಣಯಿಸಬೇಕಾಗಿದೆ.

ಅಂಶ *1*ಃ ಅರ್ಜಿದಾರ/*1* ಮತ್ತು *2* ನೇ ಆರೋಪಿತರು
ಕೋರಿರುವಂತೆ ಜಾಮೀನು ಪಡೆಯಲು ಅರ್ಹರೇ *?*

ಅಂಶ *2* ಃ ಯಾವ ಆದೇಶ?

*7.* ಮೇಲ್ಕಂಡ ಅಂಶಗಳನ್ನು ಈ ಮುಂದಿನಂತೆ ನಿರ್ಣಯಿಸಲಾಗಿದೆ.

ಅಂಶ *1*ಃ ಸಕಾರಾತ್ಮಕವಾಗಿ

ಅಂಶ *2*ಃ ಅಂತಿಮ ಆದೇಶದಂತೆ.

## ಕಾರಣಗಳು

*8.* ಅಂಶ *1*ಃ ಎದುರುದಾರ -ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಸಿಬ್ಬಂದಿ ಜೊತೆ ಗಸ್ತಿನಲ್ಲಿ ಇದ್ದಾಗ *1* ನೇ ಆರೋಪಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದು ಅವನ ಬಳಿ ಒಂದು ಬ್ಯಾಗ್ನಲ್ಲಿ ಲ್ಯಾಪ್‌ಟಾಪ್‌ಗಳನ್ನು ಇಟ್ಟುಕೊಂಡು ಮಾರಾಟ ಮಾಡಲು ಬಂದಿದ್ದ ಅವನನ್ನು ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದಾಗ ಅವನು ಓಡಿಹೋಗಲು ಪ್ರಯತ್ನಿಸಿದ್ದು ಅವರನ್ನು ದಸ್ತಗಿರಿ ಮಾಡಿ ವಿಚಾರಣೆಗೊಳಪಡಿಸಿದ್ದು ಅವನು ಸಮಂಜಸ ಉತ್ತರವನ್ನು ನೀಡಲಿಲ್ಲ. ನಂತರ ವಿಚಾರಣೆ ಮಾಡಿದಾಗ ಅರ್ಜಿದಾರ/*2* ನೇ ಆರೋಪಿ ತನ್ನ ಬಳಿ ಇದ್ದ *25* ಲ್ಯಾಪ್ಟಾಪ್ಗಳನ್ನು ತೋರಿಸಿ ಅವುಗಳಲ್ಲಿ *4* ಲ್ಯಾಪ್ಟಾಪ್ ಗಳನ್ನು ಅರ್ಜಿದಾರ/*1* ನೇ ಆರೋಪಿಗೆ ಮಾರಾಟ ಮಾಡಲು ಹೇಳಿ ಬಂದ ಹಣದಲ್ಲಿ ಇಬ್ಬರೂ ಅರ್ಧರ್ಧ ಹಣವನ್ನು ಹಂಚಿಕೊಳ್ಳುವುದು ಎಂದು ತಿಳಿಸಿದ ಎಂದು ಹೇಳಿಕೆ ನೀಡಿದ್ದಾಗಿ ವರದಿಯನ್ನು ನೀಡಿದ್ದು ಅದರ ಆಧಾರದ ಮೇಲೆ ಭಾ.ದಂ.ಸಂ

ಕಲಂ *420,379,* ಸಹವಾಚಕ ದಂ.ಪ್ರ.ಸಂ. *41* ಮತ್ತು *102* ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ.

*7.* ಅರ್ಜಿದಾರರು ಬಂಧನದ ಅರ್ಜಿಯ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದರ ಪ್ರಕಾರ ವಿಚಾರಣೆ ಮಾಡಿದಾಗ ಪ್ರಕರಣದ ಆರೋಪಿಗಳು ಶಿವಾಜಿನಗರದ ಲೇಡಿ ಕರ್ಜನ್ ರಸ್ತೆ ರಮಣಶ್ರಿ ಛೇಂಬರ್ಸ್ ಕಾಂಪ್ಲೆಕ್ಸನ ರೂಮನ್ನು ಬಾಡಿಗೆಗೆ ಪಡೆದು ಅದರಲ್ಲಿ ರೋಜ್ ಜ್ಯೂವೆಲ್ಲರಿ ಎಂಬ ಅಂಗಡಿಯನ್ನು ತೆರೆದು ಆಭರಣಗಳಿಗೆ ವಿನ್ಯಾಸ ಮಾಡುವ ನೆಪದಲ್ಲಿ ಕಛೇರಿಯನ್ನು ತೆರೆದು ಸದರಿ ಕಛೇರಿಗೆ ಪೀಣ್ಯದಲ್ಲಿರುವ ಎಸ್ *99* ಕಂಪೆನಿಯಿಂದ ಮತ್ತು ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ರೆಂಟ್ ಶೇರ್ ಎಂಬ ಕಂಪೆನಿಯಿಂದ ಲ್ಯಾಪ್ ಟಾಪ್ ಗಳನ್ನು ಬಾಡಿಗೆಗೆ ಪಡೆದು ಮತ್ತು ಬೇರೆ ಕಂಪೆನಿಗಳಿಂದ *175* ಲ್ಯಾಪ್ ಟಾಪ್ ಗಳನ್ನು ಬಾಡಿಗೆಗೆ ಪಡೆದು ಮಾರಾಟ ಮಾಡಿ ಮೋಸ ಮಾಡಿರುವುದು ಕಂಡು ಬರುತ್ತದೆ.

ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಆರೋಪಿಗಳು ಲ್ಯಾಪ್ ಟಾಪ್ ಗಳನ್ನು ಕಳ್ಳತನ ಮಾಡಿರುವುದು ಕಾಣುವುದಿಲ್ಲ. ಬದಲಿಗೆ ಲ್ಯಾಪ್ ಟಾಪ್ ಗಳನ್ನು ಮಾರಾಟ ಮಾಡುತ್ತಿದ್ದುದು ಕಂಡು ಬರುತ್ತದೆ. ಹೀಗಿರುವಾಗ ಬಾಡಿಗೆಗೆ ನೀಡಿದ ಕಂಪೆನಿಗಳು ಪಿರ್ಯಾದನ್ನು ನೀಡಿರುವುದು ಕಂಡುಬರುವುದಿಲ್ಲ. ಆಪಾಧಿಸಲಾದ ಆರೋಪಗಳು ಮರಣ ದಂಡನೆ ಅಥವಾ ಜೀವಾವಧಿ ಶಿಕ್ಷೆಗೊಳಪಡಿಸುವ ಅಪರಾಧಗಳಾಗಿರುವುದಿಲ್ಲ.

ಈ ಸನ್ನಿವೇಶದಲ್ಲಿ ಸೂಕ್ತವಾದ ಷರತ್ತುಗಳನ್ನು ವಿಧಿಸಿ ಅರ್ಜಿದಾರರು/*1* ಮತ್ತು *2* ನೇ ಆರೋಪಿತರಿಗೆ ಜಾಮೀನು ನೀಡಬಹುದೆಂದು ಅಭಿಪ್ರಾಯಪಡುತ್ತೇನೆ. ಆದ್ದರಿಂದ ಅಂಶ-*1* ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

*8.* ಅಂಶ-*2*ಃ ಮೇಲ್ಕಂಡ ಕಾರಣಗಳಿಗಾಗಿ ಈ ಮುಂದಿನ ಃ

## <u>**ಆದೇಶ**</u>

ಅರ್ಜಿದಾರರು/*1* ಮತ್ತು *2* ನೇ ಆರೋಪಿತರು ಕೋರಿ ದಂಡ ಪ್ರಕ್ರಿಯಾ ಸಂಹಿತೆಯ ಕಲಂ *439* ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಈ ಕೆಳಕಂಡಂತೆ ಪುರಸ್ಕರಿಸಲಾಗಿದೆ.

ಎದುರುದಾರ -ಪೊಲೀಸ್ ಠಾಣೆಯಲ್ಲಿ ಮೊ.ಸಂಃ *142/2020* ರಲ್ಲಿ ಭಾ.ದಂ.ಸಂ ಕಲಂ *420,379,* ಸಹವಾಚಕ ದಂ.ಪ್ರ.ಸಂ. *41* ಮತ್ತು *102* ರ ಅಡಿಯಲ್ಲಿ ನೊಂದಾವಣೆಯಾಗಿರುವ ಪ್ರಕರಣಕ್ಕೆ ಈ ಮೂಲಕ ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಜಾಮೀನನ್ನು ನೀಡಲಾಗಿದೆ.

*1)*ಅರ್ಜಿದಾರರು ಪಿರ್ಯಾದುದಾರ ಅಥವಾ ಸಾಕ್ಷೀದಾರರಿಗೆ ಯಾವುದೇ ಬೆದರಿಕೆ ಹಾಕಬಾರದು.

*2)* ಅರ್ಜಿದಾರರು ತನಿಖೆಗೆ ಸಂಪೂರ್ಣ ಸಹಕರಿಸುವುದು.

*3)* ಅರ್ಜಿದಾರರು ನ್ಯಾಯಾಲಯದಲ್ಲಿ ಪ್ರಕರಣ ಇದ್ದಾಗ ನ್ಯಾಯಾಲಯಕ್ಕೆ ತಪ್ಪದೇ ಹಾಜರಾಗುವುದು.

*4)* ಅರ್ಜಿದಾರರು *10* ನೇ ಎ.ಸಿ.ಎಂ.ಎಂ ನ್ಯಾಯಾಧೀಶರ ವಿವೇಚನೆಗೆ ಸಮಾಧಾನ ಆಗುವ ತಲಾ ಒಬ್ಬ ಜಾಮೀನುದಾರರನ್ನು ರೂ *50,000/-* ಮೊತ್ತಕ್ಕೆ ಹಾಗೂ ಅಷ್ಟೇ ಮೊತ್ತಕ್ಕೆ ತಲಾ ಸ್ವಂತ ಮುಚ್ಚಳಿಕೆಯನ್ನು ಒದಗಿಸುವುದು.

*5)* ದೋಷಾರೋಪಣಾ ಪಟ್ಟಿ ಅಥವಾ ಅಂತಿಮ ವರದಿ ಸಲ್ಲಿಸುವವರೆಗೂ ಪ್ರತಿ ತಿಂಗಳ ಪರ್ಯಾಯ ಭಾನುವಾರಗಳಂದು ಮಧ್ಯಾಹ್ನ *2* ಗಂಟೆ ಸಮಯದಲ್ಲಿ ತನಿಖಾಧಿಕಾರಿಯವರ ಮುಂದೆ ಹಾಜರಾಗಿ ಹಾಜರಾತಿ ನೀಡತಕ್ಕದ್ದು

*6)* ಮೇಲಿನ ಷರತ್ತುಗಳನ್ನು ಪಾಲನೆ ಮಾಡುವುದಕ್ಕೆ ಒಳಪಟ್ಟು ಅರ್ಜಿದಾರರನ್ನು ಜಾಮೀನಿನಲ್ಲಿ ಬಿಡುಗಡೆ ಮಾಡಲಾಗಿದೆ.

ಅರ್ಜಿದಾರ/*1* ನೇ ಆರೋಪಿಗೆ ಸಂಬಂಧಿಸಿದ ಕ್ರಿಮಿನಲ್ ಮಿಸ್. ಸಂ. *25013/2021* ಮೂಲ ಪ್ರತಿಯನ್ನು ಈ ಕಡತದಲ್ಲಿಯೂ ಇದರ ನಕಲನ್ನು ಅರ್ಜಿದಾರ/*2* ನೇ ಆರೋಪಿಗೆ ಸಂಬಂಧಿಸಿದ ಕ್ರಿಮಿನಲ್ ಮಿಸ್. ಸಂ. *25017/2021* ಕಡತದಲ್ಲಿ ಇಡುವುದು.

*(*ತೀರ್ಪು -ಬರಹಗಾರರಿಗೆ ಉಕ್ತಲೇಖನ ನೀಡಲಾಗಿ ಅವರು ತರ್ಜುಮೆ ಮಾಡಿ ಬೆರಳಚ್ಚು ಮಾಡಿದ ಮೂಲಕ ತಿದ್ದುಪಡಿ ಮಾಡಿ ಈ ದಿನ *19* ನೇ ಜನವರಿ *2021* ರಂದು ತೆರೆದ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು*)*

*(*ಡಿ.ಎಸ್. ವಿಜಯ ಕುಮಾರ್*)*
*I/c 4* ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ಘೋಷಿಸಲಾಯಿತು.*(ಪ್ರತ್ಯೇಕ ಆದೇಶದೊಂದಿಗೆ)*

**ಆದೇಶ**

ಅರ್ಜಿದಾರರು/*1* ಮತ್ತು *2* ನೇ ಆರೋಪಿತರು ಕೋರಿ ದಂಡ ಪ್ರಕ್ರಿಯಾ ಸಂಹಿತೆಯ ಕಲಂ *439* ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಈ ಕೆಳಕಂಡಂತೆ ಪುರಸ್ಕರಿಸಲಾಗಿದೆ.

ಎದುರುದಾರ -ಪೊಲೀಸ್ ಠಾಣೆಯಲ್ಲಿ ಮೊ.ಸಂಃ *142/2020* ರಲ್ಲಿ ಭಾ.ದಂ.ಸಂ ಕಲಂ *420,379,* ಸಹವಾಚಕ ದಂ.ಪ್ರ.ಸಂ. *41* ಮತ್ತು *102* ರ ಅಡಿಯಲ್ಲಿ ನೊಂದಾವಣೆಯಾಗಿರುವ ಪ್ರಕರಣಕ್ಕೆ ಈ ಮೂಲಕ ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಜಾಮೀನನ್ನು ನೀಡಲಾಗಿದೆ.

*1)*ಅರ್ಜಿದಾರರು ಪಿರ್ಯಾದುದಾರ ಅಥವಾ ಸಾಕ್ಷೀದಾರರಿಗೆ ಯಾವುದೇ ಬೆದರಿಕೆ ಹಾಕಬಾರದು.

*2)* ಅರ್ಜಿದಾರರು ತನಿಖೆಗೆ ಸಂಪೂರ್ಣ ಸಹಕರಿಸುವುದು.

*3)* ಅರ್ಜಿದಾರರು ನ್ಯಾಯಾಲಯದಲ್ಲಿ ಪ್ರಕರಣ ಇದ್ದಾಗ ನ್ಯಾಯಾಲಯಕ್ಕೆ ತಪ್ಪದೇ ಹಾಜರಾಗುವುದು.

*4)* ಅರ್ಜಿದಾರರು *10* ನೇ ಎ.ಸಿ.ಎಂ.ಎಂ ನ್ಯಾಯಾಧೀಶರ ವಿವೇಚನೆಗೆ ಸಮಾಧಾನ ಆಗುವ ತಲಾ ಒಬ್ಬ ಜಾಮೀನುದಾರರನ್ನು ರೂ *50,000/-* ಮೊತ್ತಕ್ಕೆ ಹಾಗೂ ಅಷ್ಟೇ ಮೊತ್ತಕ್ಕೆ ತಲಾ ಸ್ವಂತ ಮುಚ್ಚಳಿಕೆಯನ್ನು ಒದಗಿಸುವುದು.

*5)* ದೋಷಾರೋಪಣಾ ಪಟ್ಟಿ ಅಥವಾ ಅಂತಿಮ ವರದಿ ಸಲ್ಲಿಸುವವರೆಗೂ ಪ್ರತಿ ತಿಂಗಳ ಪರ್ಯಾಯ ಭಾನುವಾರಗಳಂದು ಮಧ್ಯಾಹ್ನ *2* ಗಂಟೆ ಸಮಯದಲ್ಲಿ ತನಿಖಾಧಿಕಾರಿಯವರ ಮುಂದೆ ಹಾಜರಾಗಿ ಹಾಜರಾತಿ ನೀಡತಕ್ಕದ್ದು

*6)* ಮೇಲಿನ ಷರತ್ತುಗಳನ್ನು ಪಾಲನೆ ಮಾಡುವುದಕ್ಕೆ ಒಳಪಟ್ಟು ಅರ್ಜಿದಾರರನ್ನು ಜಾಮೀನಿನಲ್ಲಿ ಬಿಡುಗಡೆ ಮಾಡಲಾಗಿದೆ.

ಅರ್ಜಿದಾರ/*1* ನೇ ಆರೋಪಿಗೆ ಸಂಬಂಧಿಸಿದ ಕ್ರಿಮಿನಲ್ ಮಿಸ್. ಸಂ. *25013/2021* ಮೂಲ ಪ್ರತಿಯನ್ನು ಈ ಕಡತದಲ್ಲಿಯೂ ಇದರ ನಕಲನ್ನು ಅರ್ಜಿದಾರ/*2* ನೇ ಆರೋಪಿಗೆ ಸಂಬಂಧಿಸಿದ ಕ್ರಿಮಿನಲ್ ಮಿಸ್. ಸಂ. *25017/2021* ಕಡತದಲ್ಲಿ ಇಡುವುದು.

*26* ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು.

ಅರ್ಜಿದಾರರು ನಿರೀಕ್ಷಣಾ ಜಾಮೀನನ್ನು ಕೋರಿ ದಂಡ ಪ್ರಕ್ರಿಯಾ ಸಂಹಿತೆಯ ಕಲಂ *438* ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಈ ಕೆಳಕಂಡಂತೆ ಪುರಸ್ಕರಿಸಲಾಗಿದೆ.

*1)* ಈ ದಿನಾಂಕದಿಂದ *2* ತಿಂಗಳವರೆಗೆ ಪ್ರತಿ ಪರ್ಯಾಯ ಭಾನುವಾಗಳಂದು ತನಿಖಾಧಿಕರಿಯವರ ಮುಂದೆ ಹಾಜರಾಗತಕ್ಕದ್ದು

*2)*ಅರ್ಜಿದಾರರು ಪಿರ್ಯಾದುದಾರು ಅಥವಾ ಸಾಕ್ಷೀದಾರರಿಗೆ ಯಾವುದೇ ಬೆದರಿಕೆ ಹಾಕಬಾರದು.

*3)* ಅರ್ಜಿದಾರರು ಪುನಃ ಇಂತಹ ಅಪರಾಧಗಳನ್ನು ಎಸಗಬಾರದು.

*4)* ಅರ್ಜಿದಾರರು ತನಿಖೆಗೆ ಸಂಪೂರ್ಣ ಸಹಕರಿಸುವುದು.

ಮೇಲಿನ ಷರತ್ತುಗಳಿಗೆ ಒಳಪಟ್ಟು ಎದುರುದಾರ / ಅರ್ಜಿದಾರರು ತಲಾ ರೂ *50,000*/- ಸ್ವತಃ ಮುಚ್ಚಳಿಕೆ

ಮತ್ತು ಅದೇ ಮೊತ್ತಕ್ಕೆ ಒಬ್ಬ ಜಾಮೀನುದಾರರನ್ನು ನೀಡತಕ್ಕದ್ದು.

ಈ ನಿರೀಕ್ಷಣಾ ಜಾಮೀನು *2* ತಿಂಗಳಕಾಲ ಜಾರಿಯಲ್ಲಿರತಕ್ಕದ್ದು ಎಂದು ಆದೇಶಿಸಲಾಗಿದೆ

*26* ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು.